MISTAKES IN X STANDARD SCIENCE TEXT BOOK

498. Sri B. B. Sayanak (Belgaum) .—

Will the Minisster for Education be pleased to state :—

(*a*) whether it has come to the notice of Government that in the X Standard Science Text book there are glaring mistakes ;

(*b* if so, the names of the Printer and Publishers of this book ;

(*c*) the person responsible for these glaring mistakes in the text book :

Sri A R Badarinarayana (Minister for Education) .—

(*a*) In Science Book for X Standard Part II Biology (English Medium) mistakes have come to notice.

(*b*) Messrs. Sri Kalanidhi Press, Chickpet, Bangalore 2-A.

(*c*) Both the Printer and the Proof Readers are responsible for this. Suitable action being taken against them.

Sri B. B. Sayanak .—In answer to (*a*), you have stated that in Science Book for X Standard Part II Biology (English medium) mistakes have come to notice. May I know how many books have been printed by the Director of Text-Books and how many mistakes have come to the notice of the Director ?

‡ ಶ್ರೀ ಎಸ್. ಆರ್. ಬದರಿನಾರಾಯಣ್ .—ಇದು ೨ ವರ್ಷದ ಹಿಂದೆ ಆಗಿರತಕ್ಕಂಥ ತಪ್ಪು. ಆ ತಪ್ಪು ಸರ್ಕಾರದ ನೋಟೀಸಿಗೆ ಬಂದ ತಕ್ಷಣ ರೆಕ್ಟಿಫೈ ಮಾಡಿದ್ದಾರೆ. ಈಗ ನ್ಯಾಷನಲೈಸೇಷನ್ ಆಫ್ ಟೆಕ್ಸ್ಟ್ ಬುಕ್ ಅಂತ ಎಲ್ಲವನ್ನೂ ರಾಷ್ಟ್ರೀಕರಣ ಮಾಡಿ ಸರ್ಕಾರದವರೇ ಪ್ರಿಂಟ್ ಮಾಡುತ್ತಿದ್ದಾರೆ.

ಎನ್. ಬಸವಯ್ಯ .—ಅನೇಕ ಕಡೆಗಳಲ್ಲಿ ಸರ್ಕಾರದಿಂದ ಪ್ರಿಂಟ್ ಆಗಿರತಕ್ಕಂಥ ಪುಸ್ತಕಗಳಲ್ಲಿ ಬಹಳ ತಪ್ಪುಗಳು ಆಗುತ್ತಿವೆ. ಮುಂದೆ ಅಂತಹ ತಪ್ಪುಗಳು ಇಲ್ಲದೆ ಸರಿಯಾದ ಪುಸ್ತಕಗಳನ್ನು ಒದಗಿಸುವುದಕ್ಕೆ ಸರ್ಕಾರದವರು ಏನಾದರೂ ದಿಟ್ಟತನವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧರಿದ್ದಾರೆಯೇ?

ಶ್ರೀ ಎ. ಆರ್. ಬದರಿನಾರಾಯಣ್ .—ಈ ತಪ್ಪುಗಳು ಹಿಂದೆ ಆಗಿದ್ದುದು. ಈಗ ಬಹಳ ಕಡಿಮೆಯಾಗಿದೆ. ಹಿಂದೆ ಆಗಿದ್ದುದನ್ನು ರೆಕ್ಟಿಫೈ ಮಾಡಿದ್ದಾರೆ.

ಶ್ರೀ ಎನ್. ಬಸವಯ್ಯ .—ಈ ವರ್ಷದಲ್ಲೂ ಕೂಡ ಪುಸ್ತಕಗಳನ್ನು ಪ್ರಿಂಟ್ ಮಾಡಿಸುವಾಗ ಏನಾದರೂ ತಪ್ಪು ಬಿದ್ದರೆ ಏನು ಕಾರ್ಯಕ್ರಮ ಕೈಕೊಳ್ಳುತ್ತೀರಿ ?

ಶ್ರೀ ಎ. ಆರ್. ಬದರಿನಾರಾಯಣ್ .—ಅಂತಹ ತಪ್ಪುಗಳು ಏನಾದರೂ ಕಂಡುಬಂದರೆ ಅದಕ್ಕೆ ಏನು ಕಾರ್ಯಕ್ರಮ ಕೈಗೊಳ್ಳಬೇಕೋ ಅದನ್ನು ಕೈಕೊಳ್ಳುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ .—ಟೆಕ್ಸ್ಟ್ ಬುಕ್ ಕಮಿಟಿಗೆ ಸದಸ್ಯರು ಯಾರು ಯಾರು ಇದ್ದಾರೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎ. ಆರ್, ಬದರಿನಾರಾಯಣ್ . .—ಆ ಇನ್‌ಫರ್‌ಮೇಷನ್ ನನ್ನಲ್ಲಿಲ್ಲ.

ಶ್ರೀ ಹೆಚ್. ಎಸ್. ಸಿದ್ಧಪ್ಪ .—ಸ್ವಾಮಿ, (೩)ಗೆ ಉತ್ತರವಾಗಿ ಮುದ್ರಕರು ಹಾಗೂ ಕರಡಚ್ಚು ಓದಿದವರಿಬ್ಬರೂ ಇದಕ್ಕೆ ಜವಾಬ್ದಾರರಾಗಿರುತ್ತಾರೆ, ಅವರ ವಿರುದ್ಧ ಸೂಕ್ತ ಕ್ರಮ ಕೈಕೊಳ್ಳಲಾಗುತ್ತಿದೆ ಎಂದು ಹೇಳಿದ್ದೀರಿ. ಈ ರೀತಿ ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ೨ ವರ್ಷ ಕಾಲ ಬೇಕೇ ?

ಶ್ರೀ ಕೆ. ಪ್ರಭಾಕರ್ .—ಸ್ವಾಮಿ, ಹಿಂದೆ ಈ ಪುಸ್ತಕಗಳನ್ನು ಒಂದು ಪವಿತ್ರ ಗ್ರಂಥ ಎಂದು ತಿಳಿದುಕೊಂಡಿದ್ದೆವು. ಒಂದೇ ಸಣ್ಣಪುಟ್ಟ ತಪ್ಪುಗಳೂ ಕೂಡ ಆಗುತ್ತಿರಲಿಲ್ಲ, ಈಗ ಈ ರೀತಿ ಆಗುತ್ತಾ ಇರುವುದಕ್ಕೆ ಕಾರಣ ಏನು ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಎ. ಆರ್. ಬದರಿನಾರಾಯಣ್ .—ಕೆಲವು ಪುಸ್ತಕಗಳನ್ನು ಗೌರ್ನಮೆಂಟ್ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಮಾಡಿಸುತ್ತೇವೆ, ಕೆಲವು ಪುಸ್ತಕಗಳನ್ನು ಪ್ರೈವೇಟ್ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಮಾಡಿಸುತ್ತೇವೆ. ಇದು ಬಹುಶಃ ಪ್ರೈವೇಟ್ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಆವರ ಒಂದು ಕಾರ್ಯದ ಒತ್ತಡದಿಂದ ಈ ರೀತಿ ತಪ್ಪು ಬಿದ್ದಿರಬಹುದು. ಆ ರೀತಿ ತಪ್ಪು ಮಾಡಿದ್ದವರಿಗೆ ಏನು ಶಿಕ್ಷೆ ಮಾಡಬೇಕೋ ಅದನ್ನು ಮಾಡಿದ್ದೇವೆ.

SRI B. B. SAYANAK .—When is the Government going to take action against the printers and the proof readers?

SRI A. R. BADARINARAYAN .—We have already taken action against the Printers.

SUPPLYING ELECTRICITY TO I. P. SETS OF GOPINATHA AND OTHER VILLAGES OF KOLLEGAL TALUK.

519. SRI R. RACHE GOWDA (Hanur) —

Will the Minister of Pubilc Works and Electricity be pleased to state :—

(*a*) When the estimates for supplying electricity to I. P. sets of Gopinatha and Kurathi-Housr villages of Kollegal taluk were prepared ;

(*b*) the estimated amount in respect of each of them :

(*c*) the reason for not according sanction ;

SRI H. M. CHANNABASAPPA (Minister for Public Works and Electricity. —

(*a*) and (*b*) Estimate amounting to Rs 5,01,450 for arranging power supply to 57 I. P. sets at Gopinatha village was prepared on 15-4-1971, while that amounting to Rs. 1,94,000 for power supply to 30 I.P. sets at Kurathi-Hosur was perpared on 14-4-1971.

(*c*) The estimates could not be processed by the M. S. E. B. as the Voltage regulation was beyond permissible limits.

ಶ್ರೀ ಆರ್. ರಾಚೇಗೌಡ : ಸ್ವಾಮಿ (ಇ) ಗೆ ಉತ್ತರವಾಗಿ ವಿದ್ಯುಚ್ಛಲ (ವೋಲ್ಟೇಜ್)ದ ನಿಯಂತ್ರಣವು ಪರಿಮಿತಿಗೊಳಿಸುವುದುದಕ್ಕಿಂತ ಹೆಚ್ಚಾಗಿದ್ದುದರಿಂದ ಮೈಸೂರು ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಯವರು ಅಂದಾಜುಗಳನ್ನು ಪರಿಷ್ಕರಿಸಲು ಸಾಧ್ಯವಾಗಿಲ್ಲ ಎಂದು ಹೇಳಿದ್ದೀರಿ. ಆದುದರಿಂದ ವಿದ್ಯುಚ್ಛಕ್ತಿ ಮಂಡಲಿಯವರು ಈ ವಿದ್ಯುಚ್ಛಲ (ವೋಲ್ಟೇಜ್) ನಿಯಂತ್ರಣವನ್ನು ಹೆಚ್ಚು ಮಾಡುವುದಕ್ಕೆ ಒಂದು ಸಬ್ ಸ್ಟೇಷನ್‌ನ್ನು ಕೌದಳ್ಳಿಯಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?